ಕರ್ನಾಟಕ ಸರ್ಕಾರ
Government of karnataka
ಡಿಎಸ್ಇಆರ್‌ಟಿ
DSERT
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BANGALORE - 560 085
Email: dsert.kar@nic.in Website: http://dsert.kar.nic.in
Phone : 080 - 26422372, 26422373, 26422374, Fax - 26422377

ಸಂಖ್ಯೆ:ಡಿ.ಎಸ್.ಇ.ಆರ್.ಟಿ/ಟಿ.ಇ.ಸಿ/ಬೇ ಸಂ/01/2016-17 ದಿನಾಂಕ: 27.03.2017

## ಸುತ್ತೋಲೆ

ವಿಷಯ: ಬರಪೀಡಿತ ತಾಲ್ಲೂಕುಗಳಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಬೇಸಿಗೆ ರಜಾವಧಿಯಲ್ಲಿ ಮಧ್ಯಾಹ್ನ ಬಿಸಿಯೂಟ ಹಾಗೂ ಬೇಸಿಗೆ ಶಿಬಿರ-ಬೇಸಿಗೆ ಸಂಭ್ರಮ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ

ಉಲ್ಲೇಖ: 1. ಮಾನ್ಯ ಆಯುಕ್ತರು, ಸಾಶಿಇ, ಇವರ ಸುತ್ತೋಲೆ ಸಂಖ್ಯೆ ಎಂ2/ಅದಾ/ಬ ಪ್ರ ಅ ದಾ ಕಾ ಮುಂ ಬಗ್ಗೆ/27/2016-17 ದಿನಾಂಕ 07.03.17

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ 30 ಜಿಲ್ಲೆಗಳ 160 ಕಂದಾಯ ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಿರುವ ಹಿನ್ನೆಲೆಯಲ್ಲಿ ಮಧ್ಯಾಹ್ನ ಬಿಸಿಯೂಟ ಯೋಜನೆ ಜಾರಿಗೊಳಿಸುವ ಸಂಬಂಧ ಉಲ್ಲೇಖದಲ್ಲಿ ವಿವರವಾದ ಸುತ್ತೋಲೆಯನ್ನು ನೀಡಲಾಗಿರುತ್ತದೆ.

ಮುಂದುವರೆದು ಸರ್ಕಾರದ ಹಂತದಲ್ಲಿ ನಡೆದ ಚರ್ಚೆಯ ಹಿನ್ನೆಲೆಯಲ್ಲಿ ಬೇಸಿಗೆ ರಜಾವಧಿಯಲ್ಲಿ ಮಧ್ಯಾಹ್ನ ಬಿಸಿಯೂಟ ಯೋಜನೆಗೆ ಗುರುತಿಸಲ್ಪಟ್ಟ ಶಾಲೆಗಳ ಪೈಕಿ 150ಕ್ಕಿಂತಲೂ ಹೆಚ್ಚು ಮಕ್ಕಳಿರುವ ಪ್ರಾಥಮಿಕ/ಹಿರಿಯ ಪ್ರಾಥಮಿಕ ಶಾಲೆಗಳನ್ನು ಗುರುತಿಸಿ ಈ ಶಾಲೆಗಳಲ್ಲಿ 2016-17 ನೇ ಸಾಲಿನಲ್ಲಿ 5 ಮತ್ತು 6 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ (ಅಂದರೆ 2017-18 ನೇ ಸಾಲಿನಲ್ಲಿ 6 ಮತ್ತು 7ನೇ ತರಗತಿಗೆ ದಾಖಲಾಗುವ) ಮಕ್ಕಳಿಗೆ "ಸ್ವಲ್ಪ ಓದು-ಸ್ವಲ್ಪ ಮೋಜು" ಆಧಾರಿತ ಬೇಸಿಗೆ ಸಂಭ್ರಮ ಕಲಿಕಾ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲು ತೀರ್ಮಾನವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಥಮ್ ಸಂಸ್ಥೆಯ ಸಹಯೋಗದೊಂದಿಗೆ ಕಲಿಕಾ ಸಾಮಾಗ್ರಿಯನ್ನು ಸಿದ್ಧಪಡಿಸಲಾಗಿದೆ ಮತ್ತು ಸರ್ಕಾರಿ ಮುದ್ರಣಾಲಯದ ಮೂಲಕ ಮುದ್ರಿಸಿ ಸರಬರಾಜು ಮಾಡಲು ಕ್ರಮವಹಿಸಲಾಗಿದೆ.

ಶಿಕ್ಷಕರಿಗೆ ತರಬೇತಿ ನೀಡುವ ಸಲುವಾಗಿ ಜಿಲ್ಲಾ ಮಟ್ಟದ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಯನ್ನು ನೀಡಲಾಗಿರುತ್ತದೆ. 2015-16ನೇ ಸಾಲಿನ DISE ಆಧಾರದ ಮೇಲೆ ರಾಜ್ಯದ ಒಟ್ಟು 7049 ಶಾಲೆಗಳನ್ನು ಗುರುತಿಸಲಾಗಿದೆ. ತಾಲ್ಲೂಕುವಾರು ಗುರುತಿಸಲ್ಪಟ್ಟ ಶಾಲೆಗಳ ಪಟ್ಟಿಯನ್ನು ಸಂಬಂಧಪಟ್ಟವರಿಗೆ ಇ-ಮೇಲ್ ಮೂಲಕ ಕಳುಹಿಸಲಾಗಿರುತ್ತದೆ.

ಉಲ್ಲೇಖ (1)ರ ಸುತ್ತೋಲೆಯ ರೀತ್ಯಾ ಮಧ್ಯಾಹ್ನ ಬಿಸಿಯೂಟ ಕಾರ್ಯಕ್ರಮಕ್ಕೆ ಶಾಲೆಗಳನ್ನು ಗುರುತಿಸುವ ಸಂಬಂಧ ಸ್ಪಷ್ಟ ನಿರ್ದೇಶನ ನೀಡಲಾಗಿದೆ. ಈ ನಿರ್ದೇಶನದ ಮುಂದುವರೆದ ಭಾಗವಾಗಿ ಬೇಸಿಗೆ ಸಂಭ್ರಮ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಸಂಬಂಧ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

### 1. ಶಿಕ್ಷಕರ ಗುರುತಿಸುವಿಕೆ ಮತ್ತು ತರಬೇತಿ:

ಉಲ್ಲೇಖ(1) ರ ಸುತ್ತೋಲೆಯಲ್ಲಿ ಕಾರ್ಯಕ್ರಮಕ್ಕೆ ಶಿಕ್ಷಕರನ್ನು ಗುರುತಿಸಲು ಕ್ರಮ ಸಂಖ್ಯೆ 3ರಲ್ಲಿ ಸೂಚನೆ ನೀಡಲಾಗಿದೆ. ಈ ರೀತಿ ಗುರುತಿಸಲ್ಪಟ್ಟ ಶಿಕ್ಷಕರ ಜೊತೆಯಲ್ಲಿ ಬೇಸಿಗೆ ಸಂಭ್ರಮ ಕಾರ್ಯಕ್ರಮಕ್ಕೆ ಮತ್ತೊಬ್ಬ ಶಿಕ್ಷಕರನ್ನು 150 ಕ್ಕಿಂತ ಹೆಚ್ಚು ಮಕ್ಕಳಿರುವ ಶಾಲೆಗಳಲ್ಲಿ (2016-17 ನೇ ಸಾಲಿನಲ್ಲಿ 5 ಮತ್ತು 6 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ 25 ಮಕ್ಕಳಿಗೆ ಒಬ್ಬರು ಶಿಕ್ಷಕರಂತೆ) ಗುರುತಿಸಿ ಸ್ಪಷ್ಟ ಆದೇಶವನ್ನು

ಬಿ.ಇ.ಓ. ರವರು ನೀಡತಕ್ಕದ್ದು. ಈ ರೀತಿ ಗುರುತಿಸಲ್ಪಟ್ಟ ಬೇಸಿಗೆ ಸಂಭ್ರಮ ಕಾರ್ಯಕ್ರಮಕ್ಕೆ ಒಳಪಟ್ಟ ಶಾಲೆಗಳಲ್ಲಿನ ಇಬ್ಬರು ಶಿಕ್ಷಕರಿಗೆ ಅಂದರೆ ಮಧ್ಯಾಹ್ನ ಬಿಸಿಯೂಟ ಕಾರ್ಯಕ್ರಮಕ್ಕೆ ಗುರುತಿಸಲ್ಪಟ್ಟ ಒಬ್ಬರು ಶಿಕ್ಷಕರು ಮತ್ತು ಹೆಚ್ಚುವರಿಯಾಗಿ ಬೇಸಿಗೆ ಸಂಭ್ರಮ ಕಾರ್ಯಕ್ರಮಕ್ಕೆ ಗುರುತಿಸಲ್ಪಟ್ಟ ಒಬ್ಬರು ಶಿಕ್ಷಕರಿಗೆ ಒಂದು ದಿನದ ತರಬೇತಿ ವ್ಯವಸ್ಥೆಯನ್ನು ಕಲಿಕಾ ಸಾಮಾಗ್ರಿಗಳನ್ನು ಬಳಸಿಕೊಂಡು ನಿರ್ವಹಿಸತಕ್ಕದ್ದು. ಈ ರೀತಿ ಗುರುತಿಸಲ್ಪಟ್ಟ ಶಿಕ್ಷಕರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರ ಅಗತ್ಯ ಕಂಡುಬಂದಲ್ಲಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಇವರಿಂದ ಪೂರ್ವಾನುಮತಿ ಪಡೆಯತಕ್ಕದು.
ಉಳಿದಂತೆ ಉಲ್ಲೇಖ (1)ರಲ್ಲಿ ಸುತ್ತೋಲೆಯ ಇತರೆ ಅಂಶಗಳ ಕುರಿತು ಕ್ರಮವಹಿಸುವುದು.

2. **ಪೋಷಕರಿಗೆ ಮತ್ತು ಸಾರ್ವಜನಿಕರಿಗೆ ಮಾಹಿತಿ ನೀಡುವಿಕೆ**

ಉಲ್ಲೇಖ(1) ರ ಸುತ್ತೋಲೆಯಲ್ಲಿ ಬೇಸಿಗೆ ರಜಾವಧಿಯಲ್ಲಿ ಮಧ್ಯಾಹ್ನ ಬಿಸಿಯೂಟ ನಿರ್ವಹಣೆ ಬಗ್ಗೆ ಸೂಚನೆ ನೀಡಲಾಗಿರುತ್ತದೆ. ಮುಂದುವರೆದು ಮೇಲೆ ತಿಳಿಸಿರುವ 150 ಕ್ಕಿಂತ ಹೆಚ್ಚು ಮಕ್ಕಳಿರುವ ಶಾಲೆಗಳಲ್ಲಿ ಜಾರಿಗೊಳಿಸಲ್ಪಡುವ ಬೇಸಿಗೆ ಸಂಭ್ರಮ ಕಾರ್ಯಕ್ರಮದ ಬಗ್ಗೆ ಮುಂಚಿತವಾಗಿ ಪೋಷಕರಿಗೆ, ಸಾರ್ವಜನಿಕರಿಗೆ ಮತ್ತು ಎಸ್.ಡಿ.ಎಂ.ಸಿ. ಸದಸ್ಯರಿಗೆ ಮಾಹಿತಿಯನ್ನು ತಿಳಿಸತಕ್ಕದ್ದು. ಸ್ಥಳೀಯವಾಗಿ ಲಭ್ಯವಿರುವ ಪ್ರಚಾರ ವ್ಯವಸ್ಥೆಯನ್ನು ಬಳಸಿಕೊಳ್ಳತಕ್ಕದ್ದು. ಹಾಗೆಯೇ ಜಾಥ ಕಾರ್ಯಕ್ರಮವನ್ನು ಪ್ರೇರಣಾ ಭಾಗವಾಗಿ ನಿರ್ವಹಿಸಬಹುದಾಗಿದೆ. ಎಸ್.ಡಿ.ಎಂ.ಸಿ. ಸಹಕಾರದೊಂದಿಗೆ ಕರಪತ್ರ, ಪೋಷಕರ ಮನೆ ಮನೆಗೆ ಮಕ್ಕಳ ಮೂಲಕ ಪತ್ರ, ಶಾಲಾ ಹಂತದಲ್ಲಿ ಶಿಕ್ಷಕರಿಂದ ಪ್ರೇರಣೆ, ಸಮುದಾಯದತ್ತ ಶಾಲಾ ಕಾರ್ಯಕ್ರಮದಂದು ಈ ಕಾರ್ಯಕ್ರಮದ ಮಹತ್ವವನ್ನು ತಿಳಿಸುವುದು. ಜಿಲ್ಲಾ, ಬ್ಲಾಕ್, ಕ್ಲಸ್ಟರ್ ಹಂತದಲ್ಲಿ ರೇಡಿಯೋ, ಸುದ್ದಿ ಮಾಧ್ಯಮಗಳ ಮೂಲಕ ಪ್ರಚುರ ಪಡಿಸಲು ಕ್ರಮಕೈಗೊಳ್ಳತಕ್ಕದ್ದು. ಈ ರೀತಿ ಪ್ರಚಾರಕ್ಕಾಗಿ ಮಾಡಿದ ವ್ಯವಸ್ಥೆಯ ವರದಿಯನ್ನು ಡಯಟ್ ಪ್ರಾಂಶುಪಾಲರು ಮತ್ತು ಉಪನಿರ್ದೇಶಕರು (ಆಡಳಿತ) ಇವರು ಮಧ್ಯಾಹ್ನ ಉಪಹಾರ ಯೋಜನಾ ಕಛೇರಿಯ ಇ–ಮೇಲ್ ಮತ್ತು ಡಿ.ಎಸ್.ಇ.ಆರ್.ಟಿ. ಇ–ಮೇಲ್ ಗೆ ಕ್ರೋಢೀಕರಿಸಿ ಕಳುಹಿಸುವುದು.

3. **ಮೇಲ್ವಿಚಾರಣಾ ವ್ಯವಸ್ಥೆ**

ಈ ಎರಡೂ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಎಲ್ಲ ಪೂರ್ವ ಸಿದ್ಧತೆಗಳನ್ನು ಮತ್ತು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡು ಅನುಷ್ಠಾನದ ಅವಧಿಯಲ್ಲಿ ಮೇಲ್ವಿಚಾರಣಾ ಕಾರ್ಯತಂತ್ರಗಳನ್ನು ರೂಪಿಸಿ ಅನುಷ್ಠಾನಗೊಳಿಸತಕ್ಕದ್ದು. ಮೇಲ್ವಿಚಾರಣೆಯ ಸಂಬಂಧ ಉಲ್ಲೇಖಿತ ಸುತ್ತೋಲೆಯಲ್ಲಿ ಪ್ರಸ್ತಾಪಿಸಿರುವಂತೆ ಕ್ರಮವಹಿಸತಕ್ಕದ್ದು. ಬೇಸಿಗೆ ಸಂಭ್ರಮ ಕಾರ್ಯಕ್ರಮ ಅನುಷ್ಠಾನದ ಮಾಹಿತಿಯನ್ನು ವಿಶೇಷವಾಗಿ ಸಿದ್ಧಪಡಿಸಿರುವ App ನಲ್ಲಿ ನೀಡತಕ್ಕದ್ದು. App ಬಳಸುವ ಸಂಬಂಧ ತರಬೇತಿಯಲ್ಲಿ ಮಾಹಿತಿಯನ್ನು ನೀಡಲಾಗಿರುತ್ತದೆ.

ಮೇಲುಸ್ತುವಾರಿಯ ಸಂಬಂಧ ಉಲ್ಲೇಖಿತ ಸುತ್ತೋಲೆಯಲ್ಲಿ ಸ್ಪಷ್ಟ ನಿರ್ದೇಶನವನ್ನು ನೀಡಿದ್ದು ಬೇಸಿಗೆ ಸಂಭ್ರಮ ಕಾರ್ಯಕ್ರಮ ಅನುಷ್ಠಾನದ ಬಗ್ಗೆ ಉಸ್ತುವಾರಿ ವಹಿಸತಕ್ಕದ್ದು. ಈ ಕಾರ್ಯಕ್ರಮದ ಮೇಲ್ವಿಚಾರಣಾ ಕ್ರಮಗಳನ್ನು ಡಯಟ್ ಹಂತದಲ್ಲಿ ನಿರ್ಧರಿಸಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಹಾಗೂ ನಿರ್ದೇಶಕರು, ಎಸ್.ಎಸ್.ಎ ಇವರಿಗೆ ಸಲ್ಲಿಸತಕ್ಕದ್ದು.

4. **ಶಿಕ್ಷಕರ ತರಬೇತಿ**

ಸೇವಾ ನಿರತ ಶಿಕ್ಷಕರಿಗೆ ತರಬೇತಿ ನೀಡಲು ಈಗಾಗಲೇ ಬಿಡುಗಡೆಯಾಗಿರುವ ಸರ್ವ ಶಿಕ್ಷಣ ಅಭಿಯಾನದ ತರಬೇತಿ ಅನುದಾನದಲ್ಲಿ ಬೇಸಿಗೆ ಸಂಭ್ರಮಕ್ಕೆ ಆಯ್ಕೆಯಾದ ಶಿಕ್ಷಕರಿಗೆ ಒಂದು ದಿನದ ತರಬೇತಿಯನ್ನು ಪ್ರತಿ ಶಿಕ್ಷಕರಿಗೆ ರೂ 100.00 ರ ಘಟಕ ವೆಚ್ಚದಲ್ಲಿ ನೀಡಲು ಕ್ರಮವಹಿಸುವುದು.

5. <u>ಜಿಲ್ಲಾ ಹಂತದಲ್ಲಿ:</u>

ಅ) ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಆಧ್ಯಕ್ಷತೆಯಲ್ಲಿ ಉಪ ನಿರ್ದೇಶಕರು (ಆಡಳಿತ), ಉಪ ನಿರ್ದೇಶಕರು (ಅಭಿವೃದ್ಧಿ) ಮತ್ತು ಶಿಕ್ಷಣಾಧಿಕಾರಿ (ಮ ಉ ಯೋ) ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆಯನ್ನು ನಡೆಸಿ ಬೇಸಿಗೆ ಶಿಬಿರಕ್ಕೆ ಆಯ್ಕೆಯಾಗಿರುವ ಶಾಲೆಗಳಲ್ಲಿ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಕ್ರಮವಹಿಸುವುದು.

ಆ) ರಾಜ್ಯ ಮಟ್ಟದಲ್ಲಿ ಎರಡು ದಿನಗಳ ತರಬೇತಿಯನ್ನು ಪ್ರತಿ ಜಿಲ್ಲೆಯ ಡಯಟ್‌ನ ಒಬ್ಬರು ನೋಡಲ್ ಅಧಿಕಾರಿ ಮತ್ತು ನಾಲ್ವರು ಸಂಪನ್ಮೂಲ ವ್ಯಕ್ತಿಗಳಿಗೆ ನಿಡಲಾಗಿದ್ದು ಇವರುಗಳನ್ನು ಬಳಸಿಕೊಂಡು ಜಿಲ್ಲಾ ಹಂತದಲ್ಲಿ ಬ್ಲಾಕ್‌ಗಳ ಅವಶ್ಯಕತೆಗನುಗುಣವಾಗಿ ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳ ತರಬೇತಿಯನ್ನು ಜಿಲ್ಲಾ ಹಂತದಲ್ಲಿ ನೀಡಲು ಡಯಟ್ ಪ್ರಾಂಶುಪಾಲರು ಕ್ರಮವಹಿಸುವುದು.

ಇ) ಈ ತರಬೇತಿಯ ನಂತರ ಬ್ಲಾಕ್ ಹಂತದಲ್ಲಿ ಶಾಲೆಗಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರ ತರಬೇತಿಯನ್ನು ಆಯೋಜಿಸಿ ದಿನಾಂಕ 07.04.17 ರೊಳಗೆ ಪೂರ್ಣಗೊಳಿಸಲು ಆಯಾ ಬ್ಲಾಕ್‌ನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವುದು.

ಈ) ಪ್ರಥಮ್ ಸಂಸ್ಥೆಯ ಪ್ರತಿನಿಧಿಗಳನ್ನೊಳಗೊಂಡಂತೆ ಬೇಸಿಗೆ ಶಿಬಿರ ನಡೆಯುವ ಬ್ಲಾಕ್‌ಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳ ಪೂರ್ವಭಾವಿ ಸಭೆಯನ್ನು ಮತ್ತು ವಾರಕ್ಕೊಮ್ಮೆ ಪರಿಶೀಲನಾ ಸಭೆಯನ್ನು ನಡೆಸಿ ನಡಾವಳಿ ದಾಖಲಿಸಿ ವರದಿ ಸಲ್ಲಿಸತಕ್ಕದು.

ಉ) ಸರ್ಕಾರಿ ಮುದ್ರಣಾಲಯದಿಂದ ಸರಬರಾಜು ಮಾಡಲ್ಪಡುವ ಕಲಿಕಾ ಸಾಮಗ್ರಿಗಳ ನಿರ್ವಹಣೆ.

ಊ) ಬೇಸಿಗೆ ಶಿಬಿರ ನಡೆಯುವ ಬ್ಲಾಕ್‌ಗಳಿಗೆ ಡಯಟ್‌ನಿಂದ ಮತ್ತು ಉಪ ನಿರ್ದೇಶಕರು (ಆಡಳಿತ) ಪ್ರಚಾರಕ್ಕಾಗಿ ಸೂಕ್ತ ವ್ಯವಸ್ಥೆ ಮತ್ತು ಮೇಲ್ವಿಚಾರಣಾ ವ್ಯವಸ್ಥೆ ಮಾಡಿಕೊಳ್ಳತಕ್ಕದು

ಋ) ಬೇಸಿಗೆ ಸಂಭ್ರಮ ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಹಂತದಲ್ಲಿ ಶಿಷ್ಟಾಚಾರ ಪಾಲಿಸಿ ನೆರವೇರಿಸತಕ್ಕದ್ದು.

ಈ ಕಾರ್ಯಕ್ರಮದ ಅನುಷ್ಠಾನ ಕುರಿತು ರಾಜ್ಯ ಹಂತದಲ್ಲಿ ವೀಡಿಯೋ ಕಾನ್ಫರೆನ್ಸ್ ಮೂಲಕ ಇಲಾಖೆಯ ಉನ್ನತ ಅಧಿಕಾರಿಗಳು ಪರಿಶೀಲನೆ ನಡೆಸಲಿದ್ದು ಕೈಗೊಂಡ ಕ್ರಮಗಳು ಮತ್ತು ಪ್ರಗತಿ ವರದಿಗಳನ್ನು ಹೊಂದಿರುವುದು ಅಪೇಕ್ಷಣೀಯ.

6. <u>ಬ್ಲಾಕ್ ಹಂತದಲ್ಲಿ</u>

ಅ) ಪೂರ್ವಸಿದ್ಧತಾ ಸಭೆ ಮತ್ತು ಅನುಪಾಲನಾ ಸಭೆಯನ್ನು ಜಿಲ್ಲಾ ಹಂತದ ತಾಲ್ಲೂಕಿಗೆ ನೇಮಕಗೊಂಡಿರುವ ನೋಡಲ್ ಅಧಿಕಾರಿಗಳು, ಸಿ.ಆರ್.ಪಿ., ಬಿ.ಆರ್.ಪಿ. ಗಳನ್ನೊಳಗೊಂಡಂತೆ ಮೇಲ್ವಿಚಾರಣಾ ಸಿಬ್ಬಂದಿಯ ಪೂರ್ವ ಸಿದ್ಧತಾ ಸಭೆ ಮತ್ತು ವಾರಕೊಮ್ಮೆ ಪ್ರಗತಿ ಪರಿಶೀಲಾ ಸಭೆಯನ್ನು ನಡೆಸಿ ಜಿಲ್ಲಾ ಹಂತಕ್ಕೆ ನಡಾವಳಿಯನ್ನು ಕಳುಹಿಸತಕ್ಕದ್ದು.

ಆ) ಈ ಕಾರ್ಯಕ್ರಮಕ್ಕೆ ಆಯ್ಕೆಯಾಗಿರುವ ಮುಖ್ಯ ಶಿಕ್ಷಕರ ಸಭೆ ನಡೆಸಿ ಕಾರ್ಯಕ್ರಮದ ಅನುಷ್ಠಾನಕ್ಕೆ ಪೂರಕ ವ್ಯವಸ್ಥೆ ಮಾಡಲು ಸೂಚಿಸತಕ್ಕದ್ದು.

ಇ) ಶಾಲಾ ಹಂತದಲ್ಲಿ ಅನುಷ್ಠಾನಕ್ಕಾಗಿ ಈ ಹಿಂದೆ ಪ್ರಸ್ತಾಪಿಸಿರುವಂತೆ ಶಿಕ್ಷಕರನ್ನು ಆಯ್ಕೆ ಮಾಡಿ ಜ್ಞಾಪನಾದ ಮೂಲಕ ಆದೇಶವನ್ನು ಹೊರಡಿಸತಕ್ಕದ್ದು. ರಜಾವಧಿಯಲ್ಲಿ ಕಾರ್ಯಕ್ರಮ ನಡೆಸುವ ಶಿಕ್ಷಕರಿಗೆ ಸೌಲಭ್ಯಗಳು ದೊರೆಯುವುದರಿಂದ ಈ ಕಾರ್ಯವು ಅತ್ಯಗತ್ಯವಾಗಿರುತ್ತದೆ.

ಈ) ಬ್ಲಾಕ್ ಹಂತದಲ್ಲಿ ಬೇಸಿಗೆ ಸಂಭ್ರಮ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಕಾರ್ಯತಂತ್ರಗಳನ್ನು ರೂಪಿಸುವುದರ ಜೊತೆಗೆ ಶಾಲೆಗಳಲ್ಲಿ ನಿರ್ವಹಣೆಯ ಬಗ್ಗೆ ಮಾರ್ಗದರ್ಶನ, ಮೇಲ್ವಿಚಾರಣೆ ಮತ್ತು

ವರದಿ ಇತ್ಯಾದಿಗಳ ಕುರಿತು ನಿರ್ದಿಷ್ಟ ಜವಾಬ್ಧಾರಿಯೊಡನೆ ಕ್ಷೇತ್ರ ಮಟ್ಟದ ಸಿಬ್ಬಂದಿಯನ್ನು ಗೊತ್ತುಪಡಿಸತಕ್ಕದ್ದು.

ಉ) ಕಲಿಕಾ ಸಾಮಾಗ್ರಿಗಳನ್ನು ತಲುಪಿರುವಿಕೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಊ) ಆಯ್ಕೆಯಾದ ಶಾಲೆಗಳ ಶಿಕ್ಷಕರಿಗೆ ಹೋಬಳಿ/ಕ್ಲಸ್ಟರ್ ಹಂತದಲ್ಲಿ ಎಸ್.ಎಸ್.ಎ ತರಬೇತಿಗೆ ಬಿಡುಗಡೆ ಮಾಡಲಾಗಿರುವ ಅನುದಾನದಲ್ಲಿ ಎಸ್.ಎಸ್.ಎ ಮಾರ್ಗಸೂಚಿಗಳನ್ವಯ ಪ್ರತಿಯೊಬ್ಬ ಶಿಕ್ಷಕರಿಗೆ ರೂ. 100/-ಗಳನ್ನು ಬಳಸಿಕೊಂಡು ದಿನಾಂಕ 13.04.17 ರೊಳಗೆ ತರಬೇತಿಯನ್ನು ನೀಡತಕ್ಕದ್ದು.

ಬೇಸಿಗೆ ರಜೆಯಲ್ಲಿ ಮಕ್ಕಳ ಕಲಿಕೆಗೆ ಪೂರಕವಾದ ರೀತಿಯಲ್ಲಿ ಈ ಕಾರ್ಯಕ್ರಮವಿರುವುದರಿಂದ ಈ ಅವಕಾಶವನ್ನು ಬಳಸಿಕೊಂಡು ತಾಲ್ಲೂಕು ಹಂತದಲ್ಲಿ ವ್ಯವಸ್ಥಿತವಾಗಿ ಅನುಷ್ಠಾನಗೊಳಿಸತಕ್ಕದ್ದು. ಇದರ ಭಾಗವಾಗಿ ಪೂರ್ವಸಿದ್ಧತೆ, ಸೂಕ್ತ ಪ್ರಚಾರ ವ್ಯವಸ್ಥೆ ಹಾಗೂ ಕಾರ್ಯಕ್ರಮದ ಪ್ರಾರಂಭದ ದಿನ ಸಾಕೇಂತಿಕ ಉದ್ಘಾಟನೆ ಇತ್ಯಾದಿಗಳನ್ನು ನಿರ್ವಹಿಸತಕ್ಕದ್ದು.

ರಾಜ್ಯ ಮಟ್ಟದಿಂದ ಜಿಲ್ಲೆಗಳಿಗೆ ನಿಯೋಜಿತ ಅಧಿಕಾರಿಗಳು ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮಾರ್ಗದರ್ಶನ ನೀಡಿ ಒತ್ತಾಸೆ ನೀಡುವುದು.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಕರ್ನಾಟಕ ಸರ್ಕಾರ

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ**

1. ರಾಜ್ಯದ ಎಲ್ಲ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರುಗಳಿಗೆ
2. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಸಾರ್ವಜನಿಕ ಶಿಕ್ಷಣ ಇಲಾಖೆ
3. ರಾಜ್ಯದ ಎಲ್ಲ ನಿರ್ದೇಶಕರು ಮತ್ತು ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ
4. ಸಹ ನಿರ್ದೇಶಕರು, ಮಧ್ಯಾಹ್ನ ಉಪಾಹಾರ ಯೋಜನೆ, ಸಾರ್ವಜನಿಕ ಶಿಕ್ಷಣ ಇಲಾಖೆ
5. ರಾಜ್ಯದ ಎಲ್ಲ ಉಪ ನಿರ್ದೇಶಕರು (ಆಡಳಿತ) ಮತ್ತು ಉಪ ನಿರ್ದೇಶಕರು (ಅಭಿವೃದ್ಧಿ)
6. ರಾಜ್ಯದ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ
7. ರಾಜ್ಯದ ಎಲ್ಲ ಶಿಕ್ಷಣಾಧಿಕಾರಿಗಳು (ಅಕ್ಷರ ದಾಸೋಹ), ಜಿಲ್ಲಾ ಪಂಚಾಯತ್ ಕಛೇರಿ
8. ರಾಜ್ಯದ ಎಲ್ಲ ಸಹಾಯಕ ನಿರ್ದೇಶಕರು (ಅಕ್ಷರ ದಾಸೋಹ), ತಾಲ್ಲೂಕು ಪಂಚಾಯತ್ ಕಛೇರಿ
9. ಕಛೇರಿ ಪ್ರತಿ

**ಪ್ರತಿಯನ್ನು ಮಾಹಿತಿಗಾಗಿ**

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರ ಇವರಿಗೆ ಸಲ್ಲಿಸಿದೆ
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ